

ಹಂದಿ ಒಪ್ಪಿಸಲು ಶುರು ಮಾಡಿದರಂತೆ. ಅದರಿಂದ ಒಳ್ಳೆಯದಾಗುತ್ತೆ ಎಂದು ಬೇರೆಡೆಗೂ ಸುದ್ದಿ ಹಬ್ಬಿದ್ದರಿಂದ ಸುತ್ತಮುತ್ತಲ ಊರಿನಿಂದಲೂ ಜನ ಬರತೊಡಗಿದರಂತೆ. ಹಂದಿ ಹರಕೆಯ ಜತೆ ಜತೆಗೆ ಅಪಾರ ಕಾಣಿಕೆಯ ಹಣವೂ ಸಂಗ್ರಹವಾಗತೊಡಗಿತಂತೆ.

ಅದೇ ಕಾಲಕ್ಕೆ ಹೋಬಳಿಯಲ್ಲಿ ಹೊಸದಾಗಿ ಈಶ್ವರ ದೇವರ ಗುಡಿ ಆಗಿತ್ತಂತಲ್ಲ. ಅದರ ಪೂಜೆಗೆ ಇಲ್ಲೆಲ್ಲೂ ಪೂಜಾರಿಗಳು ಸಿಗದೆ ಈಗಿನ ಪೂಜಾರಿಗಳ ಮುತ್ತಜ್ಜನನ್ನು ಕನ್ನಡ ಜಿಲ್ಲೆಯಿಂದ ಕರೆಸಿದ್ದರಂತೆ.

ಅವರು ದೊಡ್ಡ ಪಂಡಿತರಂತೆ. ಮಹಾ ಮಹಾ ಪುರಾಣಗಳನ್ನು ಓದಿದ್ದರಂತೆ. ಅದರಲ್ಲಿ ಒಂದು ದೊಡ್ಡ ಪುರಾಣ ಅಂತೆ. ಅದನ್ನು ಬರೆದ ಋಷಿ ಆಗಿನ ಕಾಲಕ್ಕೇ ಈ ಜಾತಿಗಳು, ಅದರಲ್ಲಿ ಯಾರು ಮೇಲು, ಯಾರು ಕೀಳು, ಮೇಲ್ಜಾತಿಯವರ ಜೊತೆ ಕೀಳು ಜಾತಿಯವರು ಹೇಗೆ ನಡೆದುಕೊಳ್ಳಬೇಕು ಎಂದು ಎಲ್ಲಾ ವಿವರವಾಗಿ ಬರೆದಿದ್ದರಂತೆ.

ಅಷ್ಟು ತಿಳಿದಿದ್ದ ಪುರೋಹಿತರಿಗೆ ಮಲೆನಾಡ ಮೂಲೆಯ ಅಪಾರ ಜನ ಆರಾಧಿಸುವ ಈ ಅರಣ್ಯದ ಚೌಡಿಯ ಪ್ರಸಿದ್ಧಿಯ ಬಗ್ಗೆ ತಿಳಿಯಿತಂತೆ. ಇಲ್ಲಿಗೆ ಬರುವ ಹಂದಿಯ ಹರಕೆ, ಸಂಗ್ರಹವಾಗುವ ಕಾಣಿಕೆ ಹಣ ಎಲ್ಲದರ ಬಗ್ಗೆ ಕೇಳಿ...

'ಹೌದಾ!' ಎಂದರಂತೆ.

ಒಂದು ದಿನ ಆ ಗೌಡರಿಗೆ ಪುರೋಹಿತರಿಂದ ಕರೆ ಬಂತಂತೆ. ಅವರ ಪಾಂಡಿತ್ಯದ ಬಗ್ಗೆ ತಿಳಿದಿದ್ದ ನಿರಕ್ಷರಕುಕ್ಷಿ ಗೌಡರು, ಅವರನ್ನು ಹೇಗೆ ಎದುರಿಸುವುದಪ್ಪಾ ಎಂದು ಹೆದರುತ್ತಲೇ ಹೋಗಿದ್ದರಂತೆ. ಜತೆಗೆ ವಾಡಿಕೆಯಂತೆ ನಮ್ಮ ಮುತ್ತಜ್ಜನೂ ಹಿಂಬಾಲಿಸಿದ್ದನಂತೆ.

ಇಬ್ಬರು ಪಕ್ಕ ಪಕ್ಕ ನಡೆಯುತ್ತಾ ಬರುವುದನ್ನು ಕಂಡ ಪುರೋಹಿತರು ಸಿಡಿಮಿಡಿಗೊಂಡು 'ಹೊಲೆಯರನ್ನು ಸರಿಸಮವಾಗಿ ನಡೆಸುವುದು ಎಷ್ಟು ಸರಿ. ಅವನು ಅಲ್ಲೆ ನಿಲ್ಲಲಿ' ಎಂದು ನಮ್ಮ ಮುತ್ತಜ್ಜನನ್ನು ಹಟ್ಟಿಯಲ್ಲೇ ನಿಲ್ಲಿಸಿದರಂತೆ. ಗೌಡರು ಜಗುಲಿ ಕಟ್ಟೆಯೇರಿ, ಮರದ ಕುರ್ಚಿಯ ಮೇಲೆ ಕುಳಿತಿದ್ದ ಪುರೋಹಿತರ ಮುಂದೆ ಭಯ ಭಕ್ತಿಯಿಂದ ಕೈ ಕಟ್ಟಿ ನಿಂತರಂತೆ.

"ನಿಮ್ಮ ಅರಣ್ಯದ ಚೌಡಿಗೆ ಭಾರೀ ಜನ ಭಕ್ತರು ನಡಕಳ್ತಾರಂತೆ... ಚೌಡಿ ಅಂದ್ರೆ ಏನು ತಿಳ್ದಿದೀಯ. ಅದು ಚಾಮುಂಡೇಶ್ವರಿ ದೇವಿಯ ಉಗ್ರ ರೂಪ. ಶೂದ್ರ ಮುಂಡೇಗಂಡರು... ನಿಮಗೆಲ್ಲಾ ಅದೆಲ್ಲಿ ತಿಳಿಯುತ್ತೆ! ಮುಂದಿನ ವರ್ಷದ ಪೂಜೆಗೂ ಮೊದಲು ಊರ ಪ್ರವೇಶದಲ್ಲಿ ಒಂದು ಚಾಮುಂಡೇಶ್ವರಿಯ ಗುಡಿ ಆಗಬೇಕು. ವರ್ಷದ ಪೂಜೆಯ ದಿನ ಮೊದಲ ಪೂಜೆ ಅದಕ್ಕೇ ಸಲ್ಲಬೇಕು. ಮೊದಲ ಹರಕೆಯೂ ಅದಕ್ಕೇ ಸಲ್ಲಬೇಕು.

ಕೂಡಲೇ ಗುಡಿ ಕಟ್ಟಿಸುವ ವ್ಯವಸ್ಥೆ ಮಾಡಿ. ಮಧ್ಯರಾತ್ರಿಗೇ ಬಂದು ನನ್ನನ್ನು ಕರೆದುಕೊಂಡು ಹೋಗಿ, ಕೋಳಿಕೂಗುವ ಮುನ್ನ ದೇವಿಯ ಪೂಜಾ ಕೈಂಕರ್ಯ ಮುಗಿಸಿಕೊಟ್ಟು ಬರುತ್ತೇನೆ. ನಂತರ ನಿಮ್ಮ ಚೌಡಿ ಪೂಜೆ ವಿಧಿಗಳನ್ನು ನೆರವೇರಿಸಿಕೊಳ್ಳಬಹುದು.

ಅವತ್ತು ಊರೆಲ್ಲಾ ಪರಿಶುದ್ಧವಾಗಿ ಮಡಿಯಿಂದ ಇರಬೇಕು. ಬೆಳಗಿನ ಎಲ್ಲಾ ಪೂಜೆಗಳು ಮುಗಿಯುವವರೆಗೂ ಹೊಲೇರು ಹೊಟ್ರು, ಮುಟ್ಟಾದ ಹೆಂಗಸರು ಯಾರೂ ಹೊರಗೆ ಬರಬಾರದು. ತಿಳೀತಾ!.

ನಿಮಗೆ ಪುರಾಣ ಏನು ಗೊತ್ತಿದೆ. ಊರು ಹೊಲಗೇರಿ ಎಲ್ಲಾ ಒಂದು ಮಾಡಿಕೊಳ್ಳಕೆ ಆಗುತ್ತಾ" ಎನ್ನುತ್ತ ಎದ್ದು ಹೋಗಿ ಒಂದು ಪುಸ್ತಕ ತಂದು, 'ನೋಡು ಇದು ಶಾಸ್ತ್ರ ಗ್ರಂಥ. ಮುನಿಗಳು ಬರೆದಿರುವುದು. ಇದರಲ್ಲಿ ಉತ್ತಮ ಕುಲದವರ ಎದುರಿಗೆ ಕೀಳು ಕುಲದವರು ಹೇಗೆ ನಡೆದುಕೊಳ್ಳಬೇಕು, ಸಮಾಜದಲ್ಲಿ ಹೆಂಗಸರ ಸ್ಥಾನಮಾನ ಏನು ಎಂಬುದನ್ನು ವಿವರವಾಗಿ ಬರೆದಿದ್ದಾರೆ, ಅದರಂತೆ ನಡೆದುಕೊಂಡರೇ ಶ್ರೇಯಸ್ಸು' ಎಂದು ಅರ್ಧಗಂಟೆ ಉಪದೇಶ ಮಾಡಿ ಕಳಿಸಿದ್ದರಂತೆ.

ಆಗಿನಿಂದ ನಮ್ಮವರೆಲ್ಲಾ ಹಬ್ಬದ ಸಂಭ್ರಮದಲ್ಲಿ ಭಾಗವಹಿಸುವುದಿರಲಿ, ಮನೆಯಿಂದ ಹೊರ ಬಂದು ಹಬ್ಬಕ್ಕೆ ಹೋಗುವವರಿಗೆ ಮುಖವನ್ನೂ ಸಹ ತೋರಿಸದಂತೆ ಆಗಿದೆ.

ಮಂಜಣ್ಣ ಬಾಲ್ಯದಲ್ಲಿ ತನ್ನ ಹಿರಿಯರಿಂದ ಕೇಳಿದ್ದನ್ನು ದುಮ್ಮನಿಗೆ ವಿವರವಾಗಿ ಹೇಳುತ್ತಿದ್ದ.

ಅವರು ಎಷ್ಟು ತಲ್ಲೀನರಾಗಿದ್ದರೆಂದರೆ, ನಗರದಲ್ಲಿ ಕಾಲೇಜು ಓದುವ ಮಂಜಣ್ಣನ ಭಾವನ ಮಗ ದೀಣೆಯ ಕಡೆಯಿಂದ ಬಂದು ಇವರ ಹಿಂದೆ ನಿಂತಿದ್ದೂ